## ನಿವೇದನೆ

# ತಾಯ ಮೊಲೆವಾಲು ನಂಜಾಗಿ ಕೊಲುವಡೆ

ಶಿಕ್ಷಣ, ವ್ಯಾಪಾರ, ಸ್ಪರ್ಧೆ, ಅಸ್ತಿತ್ವದ ಹೆಸರಿನಲ್ಲಿ ಮನುಷ್ಯ ಮನುಷ್ಯನನ್ನೇ ಬೇಟೆಯಾಡುತ್ತಿದ್ದಾನೆ. ಬಹುತೇಕ ಸಂದರ್ಭಗಳಲ್ಲಿ ಈ ಬೇಟೆ ನಾಗರಿಕ ಸಮಾಜಕ್ಕೆ ಒಪ್ಪಿತವೂ ಆಗಿದೆ. ಬೇಟೆಯ ಕ್ರೌರ್ಯ ಹಾಗೂ ಮಿಕದ ದೈನ್ಯ ಈ ಹೊತ್ತಿನ ಮನುಷ್ಯನ ಎರಡು ಮುಖಗಳಾಗಿವೆ.

ಪ್ರೇಮದ ಕುರುಡಿನಲ್ಲಿ ತಾಯಿಯ ಹೃದಯವನ್ನು ಬಗೆದ ಮಗನ ಕಥೆ ನಮ್ಮ ಪರಂಪರೆಯಲ್ಲಿದೆ. ಕೊಂದ ಮಗ ಎಡವಿದಾಗ, 'ಹುಷಾರು' ಎಂದು ತಾಯಿಹೃದಯ ಮಿಡಿದ ಕಥೆಯನ್ನೂ ನಾವು ಬಲ್ಲೆವು. ಆದರಿದು, ಮಗುವನ್ನು ತಾಯಿಯೇ ಕೊಲ್ಲುವ ಕಾಲಘಟ್ಟ. ಮಾತೃದೇವತೆ ಮೃತ್ಯುದೇವತೆಯೂ ಆಗಬಲ್ಲ ವಿಷಮ ಸನ್ನಿವೇಶ.

ಬೆಂಗಳೂರಿನಲ್ಲಿ ವಹಿವಾಟು ನಡೆಸುತ್ತಿರುವ ಉದ್ಯಮಿ ಮಹಿಳೆಯೊಬ್ಬರು ತಮ್ಮ ನಾಲ್ಕು ವರ್ಷದ ಮಗನನ್ನು ಕೊಂದಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಈ ಘಟನೆಯನ್ನು ಆರೋಪಿ ಮಹಿಳೆಯ ನೆಲೆಗಟ್ಟಿನಲ್ಲಷ್ಟೇ ಯೋಚಿಸದೆ, ಸಾಮಾಜಿಕ ಚಲನೆಯ ರೂಪದಲ್ಲಿ ನೋಡಬೇಕಾಗಿದೆ. ಒಂದಲ್ಲಾ ಒಂದು ಬಗೆಯಲ್ಲಿ ಮಹಿಳೆ ಶೋಷಣೆಗೊಳಗಾಗುತ್ತಲೇ ಇರುವ ವರ್ತಮಾನದಲ್ಲಿ, ತಾಯಿಯೊಬ್ಬಳು ತನ್ನ ಅಮಾಯಕ ಮಗುವನ್ನು ಕೊಲ್ಲುವ ಮನಸ್ಥಿತಿಯೂ ಇದೆ, 'ತಾಯ ಮೊಲೆವಾಲು ನಂಜಾಗಿ ಕೊಲುವಡೆ' ಪರಿಸ್ಥಿತಿಯೂ ಸೃಷ್ಟಿಯಾಗಿದೆ. ಸಮಕಾಲೀನ ಸಂದರ್ಭದ ವಿರೋಧಾಭಾಸಗಳು ಭಾರತೀಯ ಸಾಮಾಜಿಕ ವ್ಯವಸ್ಥೆಗೆ ಸಂಬಂಧಿಸಿದ ನಂಬಿಕೆಗಳನ್ನೇ ಬುಡಮೇಲು ಮಾಡುವಂತಿವೆ. ಮೈಮನಗಳನ್ನು ಹಂಚಿಕೊಂಡ ಸಂಗಾತಿಯನ್ನು ತರಕಾರಿಯಂತೆ ತುಣುಕು ತುಣುಕುಗಳಾಗಿ ಕತ್ತರಿಸಿರುವ ಉದಾಹರಣೆಗಳು ನಮ್ಮ ನಡುವೆಯಿವೆ. ಜಾತಿಕುರುಡಿನಲ್ಲಿ ಮಕ್ಕಳನ್ನು ಕೊಲ್ಲುತ್ತಿರುವ ತಂದೆಯರಿದ್ದಾರೆ. ಕ್ಷುಲ್ಲಕ ಕಾರಣಗಳಿಗಾಗಿ ಒಡಹುಟ್ಟುಗಳನ್ನು, ಹೆತ್ತವರನ್ನು ಕೊನೆಗಾಣಿಸಿದವರಿದ್ದಾರೆ. ಅನೈತಿಕ ಸಂಬಂಧಗಳ ಕಾರಣದಿಂದಾಗಿ ಕುಟುಂಬದಲ್ಲಿ ರಕ್ತಹರಿಸಿದವರಿದ್ದಾರೆ. ಹೆಣ್ಣುಮಕ್ಕಳನ್ನು ಬೇಟೆಯಾಡುವ ಮೃಗೀಯ ಕೃತ್ಯಗಳಿಗಂತೂ ಕೊನೆಮೊದಲೇ ಇಲ್ಲ. ಈ ಪಟ್ಟಿಯಲ್ಲೀಗ ಮಗುವನ್ನು ಕೊಂದ ಅಮ್ಮನೂ ಸೇರಿಕೊಂಡಿದ್ದಾಳೆ. ಸಂಬಂಧಗಳ ಬಗೆಗಿನ ನಂಬಿಕೆಯನ್ನು ಅಣಕ ಮಾಡುವಂತಿರುವ ಇಂಥ ಘಟನೆಗಳು ಸಮಾಜದೊಳಗಿನ ಸುಪ್ತ ಕ್ರೌರ್ಯವನ್ನು ಸೂಚಿಸುವಂತಿವೆ.

ಸಂದೀಪ್ ರೆಡ್ಡಿ ವಂಗ ನಿರ್ದೇಶನದ 'ಅನಿಮಲ್' ಸಿನಿಮಾದಲ್ಲಿನ ಹಿಂಸೆ ಹಾಗೂ ಆ ಚಿತ್ರದಲ್ಲಿ ಹೆಣ್ಣನ್ನು ನಡೆಸಿಕೊಂಡಿರುವ ಮನೋಧರ್ಮದ ಬಗ್ಗೆ ಚರ್ಚೆಗಳು ನಡೆಯುತ್ತಿರುವ ಸಂದರ್ಭವಿದು. ಸಿನಿಮಾಗಳಲ್ಲಿನ ಹಿಂಸೆ ನಮಗೆ ಆತಂಕ ಹುಟ್ಟಿಸುತ್ತದೆ. 'ಅನಿಮಲ್' ಸಿನಿಮಾ ದೊಡ್ಡ ಪ್ರಮಾಣದ ಯಶಸ್ಸು ಪಡೆದಿರುವುದು ಸಮಾಜ ಹಿಂಸೆಯನ್ನು ಆನಂದಿಸುತ್ತಿದೆಯೇ ಎನ್ನುವ ಅನುಮಾನ ಹುಟ್ಟಿಸುವಂತಿದೆ. ಕಲೆಯ ಆಶಯಗಳು ರಕ್ತಸ್ಪರ್ಶದಲ್ಲಿ ಮಸುಕು ಹಾಗೂ ಮುಕ್ಕಾಗಿರುವ ಬಗ್ಗೆ ಕಾಳಜಿಯಿಂದ ಚರ್ಚೆ ಮಾಡುತ್ತೇವೆ. ಆದರೆ, ಸಮಾಜವೆಂಬ ಪರದೆಯ ಮೇಲಿನ ವಿದ್ಯಮಾನಗಳು ಸಿನಿಮಾದಲ್ಲಿನ ಕ್ರೌರ್ಯಕ್ಕಿಂತಲೂ ಹೆಚ್ಚು ಘೋರವಾಗಿವೆ, ದಿಗಿಲು ಹುಟ್ಟಿಸುವಂತಿವೆ. ವಿಶ್ವಮಾನವ ಮಾರ್ಗಕ್ಕೆ ಬೆನ್ನು ಹಾಕಿ, ಜಾತಿ–ಧರ್ಮದ ಹೆಸರಿನಲ್ಲಿ ಚೌಕಟ್ಟುಗಳು ರೂಪುಗೊಳ್ಳುತ್ತಿರುವ ಸಂದರ್ಭ ಇಂದಿನದು. ಶಿಕ್ಷಣ, ವ್ಯಾಪಾರ, ಸ್ಪರ್ಧೆ, ಅಸ್ತಿತ್ವದ ಹೆಸರಿನಲ್ಲಿ ಮನುಷ್ಯ ಮನುಷ್ಯನನ್ನೇ ಬೇಟೆಯಾಡುತ್ತಿದ್ದಾನೆ. ಬಹುತೇಕ ಸಂದರ್ಭಗಳಲ್ಲಿ ಈ ಬೇಟೆ ನಾಗರಿಕ ಸಮಾಜಕ್ಕೆ ಒಪ್ಪಿತವೂ ಆಗಿದೆ. ಬೇಟೆಯ ಕ್ರೌರ್ಯ ಹಾಗೂ ಮಿಕದ ದೈನ್ಯ ಈ ಹೊತ್ತಿನ ಮನುಷ್ಯನ ಎರಡು ಮುಖಗಳಾಗಿವೆ.

ಬಹಳಷ್ಟು ಹೇಯ ಕೃತ್ಯಗಳಲ್ಲಿ ವಿದ್ಯಾವಂತ ತರುಣ ತರುಣಿಯರು ಭಾಗಿಯಾಗಿರುವುದು ಕಳವಳ ಹುಟ್ಟಿಸುವ ಸಂಗತಿ. ವ್ಯಕ್ತಿಯ ಸಂವೇದನೆಯನ್ನು ಆರ್ದ್ರಗೊಳಿಸುವುದು ಶಿಕ್ಷಣದ ಉದ್ದೇಶ. ಸುಶಿಕ್ಷಿತರಿಂದಲೇ ಅಮಾನವೀಯ ಕೃತ್ಯಗಳು ಘಟಿಸಿದರೆ, ನಮ್ಮ ಶಿಕ್ಷಣ ವ್ಯವಸ್ಥೆ ಸಂವೇದನಾರಹಿತವಾಗಿದೆ ಎಂದು ವಿಷಾದದಿಂದಲೇ ಹೇಳಬೇಕಾಗಿದೆ. ವಿದ್ಯಾರ್ಥಿ ದೆಸೆಯಲ್ಲಿ ಮಕ್ಕಳು ನಿರ್ವಾಹವಿಲ್ಲದೆ ಅನುಭವಿಸಬೇಕಾದ ಶಿಕ್ಷಣ ಅವರನ್ನು ಜೀವನಪೂರ್ತಿ ಕಾಡುತ್ತಿರುವಂತಿದೆ. ಮಕ್ಕಳನ್ನು ಮಾನವೀಯತೆಯ ಮೂರ್ತಿಗಳಾಗಿಸಬೇಕಾದ ಶಿಕ್ಷಣ, ರಕ್ಕಸಗುಣವನ್ನು ಮೈಗೂಡಿಸುತ್ತಿದೆ; ಬದುಕಿನ ಉದ್ದೇಶ ಭೋಗವಷ್ಟೇ ಎನ್ನುವುದನ್ನು ಎಳೆಯ–ಯುವ ಮನಸ್ಸುಗಳಿಗೆ ತುಂಬುತ್ತಿದೆ. ಬಾಲ್ಯದ ಆರ್ದ್ರತೆಯನ್ನು ಉಳಿಸುವುದಕ್ಕೆ ಕೌಟುಂಬಿಕ ವಾತಾವರಣವೂ ಪೂರಕವಾಗಿಲ್ಲ. ಕುಟುಂಬಗಳು ಛಿದ್ರವಾಗುತ್ತಾ ಹೋದಂತೆ ಮಕ್ಕಳು ಒಂಟಿಯಾಗುತ್ತಾ ಹೋಗುತ್ತಾರೆ. ಬಂಧುಮಿತ್ರರೊಂದಿಗೆ ಮಕ್ಕಳ ಬಾಲ್ಯವನ್ನು ಬೆಸೆಯುವ ಬದಲು, ಎಳೆಯರನ್ನು ಮೊಬೈಲ್‌ಗಳೊಂದಿಗೆ ಬೆಳೆಸುತ್ತಿದ್ದೇವೆ. ಇದರಿಂದಾಗಿ ದೃಷ್ಟಿ ಮಂದವಾಗುತ್ತದೆ, ಮನಸ್ಸು ಕಠಿಣವಾಗತೊಡಗುತ್ತದೆ. ಡಿಜಿಟಲ್ ಪ್ರಪಂಚವನ್ನೇ ನೈಜವೆಂದು ನಂಬುವ 'ಮೊಬೈಲ್ ತಲೆಮಾರು', ಅಕ್ಕಪಕ್ಕದ ಜೀವಗಳ ಅಸ್ತಿತ್ವವನ್ನು ನಿರ್ಲಕ್ಷಿಸತೊಡಗುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಜೀವಂತ ಮನಸ್ಸುಗಳು ಜಡಗೊಳ್ಳುವ ವಿದ್ಯಮಾನ ವೇಗವಾಗಿ ನಡೆಯುತ್ತಿರುವುದು ನಮ್ಮ ನಿದ್ದೆಯನ್ನು ಕಸಿದುಕೊಳ್ಳಬೇಕಾದ ಸಂಗತಿ. ಆದರೆ, ಆತ್ಮಸಾಕ್ಷಿಗೆ ನಿದ್ದೆಯ ಗುಳಿಗೆಗಳುಣಿಸುವ ಸಾಧ್ಯತೆಯನ್ನು ಒಪ್ಪಿಕೊಳ್ಳುತ್ತಿದ್ದೇವೆ. ಹೃದಯ ಮಂದಿರಗಳು ಜಡವಾಗುತ್ತಿರುವುದನ್ನು ನಿರ್ಲಕ್ಷಿಸಿ, ಸ್ಥಾವರಗಳನ್ನು ಸಂಭ್ರಮಿಸುವುದರಲ್ಲಿ ಉತ್ಸಾಹ ತೋರುತ್ತಿದ್ದೇವೆ. ಈ ಸಂಭ್ರಮ ಕೂಡ ಸಂವೇದನೆಗಳ ಕೊರತೆಯ ಫಲವೇ ಆಗಿದೆ.

ನಮ್ಮ ಮಕ್ಕಳ ನಾಳೆಗಳು ಹೇಗಿರುತ್ತವೆ? ಹೇಗಿರಬೇಕು? ಈ ಪ್ರಶ್ನೆ ನಮ್ಮನ್ನು ಮತ್ತೆ ಮತ್ತೆ ಕಾಡದೆ ಹೋದರೆ, ನಾವೆಲ್ಲರೂ ಭಸ್ಮಾಸುರ ಸಂತತಿಯ ವಾರಸುದಾರಿಕೆಯನ್ನು ಬಯಸಿ ಬಯಸಿ ಪಡೆದಂತಾಗುತ್ತದೆ.

■ ರಘುನಾಥ ಚ.ಹ.



ಈಶ್ವರ್